ಅವಳನ್ನು ಹುಡುಕಿ ಈ ಮಾತು ಹೇಳಿಯೇ ಬಿಡಬೇಕು ಎಂದು ತೀರ್ಮಾನಿಸಿದ ರಮೇಶನಿಗೆ, ದಿನಗಳು, ವಾರಗಳು ಉರುಳಿದಂತೆ ಯಾಕೋ ಅವಳನ್ನು ಹುಡುಕಿಕೊಂಡು ಹೋಗುವ ಉಮೇದು ಕಡಿಮೆಯಾಗತೊಡಗಿತು.



## *4*

ವಿಚಿತ್ರವೆಂದರೆ, ಮಲ್ಲಿಕಾ ಎಲ್ಲಿದ್ದಾಳೆಂದು ಹುಡುಕಬೇಕೆಂದು ರಮೇಶನಿಗೆ ಮತ್ತೆ ಮತ್ತೆ ಅನ್ನಿಸತೊಡಗಿದ್ದು ಒಂದು ಪುಟ್ಟ ಸಿನಿಮಾ ಸುದ್ದಿಯಿಂದ! ಕರೋನಾ ಕಾಯಿಲೆಯ ಭಯ ಎಲ್ಲೆಡೆ ಹಬ್ಬಿ ದೇಶದ ಜನರೆಲ್ಲ ಲಾಕ್‌ಡೌನ್‌ನಲ್ಲಿದ್ದ ಕಾಲದಲ್ಲಿ 'ನಟ ಹೃತಿಕ್ ರೋಷನ್ ಮತ್ತು ಅವನ ಮಾಜಿ ಪತ್ನಿ ಸುಸೇನ್ ಖಾನ್ ಮತ್ತೆ ಒಂದೇ ಮನೆಯಲ್ಲಿದ್ದಾರಂತೆ' ಎಂಬ ಪುಟ್ಟ ಸುದ್ದಿ ಅದು ಹೇಗೋ ಇದ್ದಕ್ಕಿದ್ದಂತೆ ರಮೇಶನ ಒಳಗಿಳಿಯತೊಡಗಿತು. ಹೃತಿಕ್ ರೋಷನ್–ಸುಸೇನ್ ಬೇರೆಯಾದ ಸ್ಟೋರಿಯನ್ನು ಐದಾರು ವರ್ಷಗಳ ಕೆಳಗೆ 'ಸಿನಿಮಾ ಸಂಜೆ' ಪ್ರೋಗ್ರಾಮಿನಲ್ಲಿ ಮಲ್ಲಿಕಾ ಕವರ್ ಮಾಡಿದ್ದು ರಮೇಶನಿಗೆ ತಕ್ಷಣ ನೆನಪಾಯಿತು. ಅವತ್ತು ರಾತ್ರಿ ಪ್ರೋಗ್ರಾಂ ಮುಗಿಸಿ ಸೀದಾ ರಮೇಶನ ಫ್ಲಾಟಿಗೆ ಬಂದಿದ್ದ ಮಲ್ಲಿಕಾ ವಿಚಿತ್ರವಾಗಿ ಡಿಸ್ಟರ್ಬ್ ಆಗಿದ್ದಳು; 'ಕ್ವಿಕ್ಕಾಗಿ ಒಂದು ಸಿಪ್ ವೈನ್ ಕೊಡು' ಎಂದು ಕೇಳಿ, ಛಕ್ಕನೆ ವೈನ್ ಹೀರಿ ಸೋಫಾಗೊರಗಿ ಸಪ್ಪಗೆ ಕೂತಳು. 'ಥೂ! ಯಾಕಾರೂ ಈ ಸ್ಟೋರೀನ ಕವರ್ ಮಾಡೋ ಖರ್ಮ ಬಂತೋ' ಎಂದು ಗೊಣಗುತ್ತಿದ್ದಳು. 'ಬಾಲಿವುಡ್ ಸ್ಟೋರಿ ಎಂದರೆ ಹಿಂದಿ ಚಾನಲ್ಲುಗಳ ಗಾಸಿಪ್ಪನ್ನೆಲ್ಲ ಜೋಡಿಸಿ ಕತೆ ಹೆಣೆಯೋದು ತಾನೇ!' ಎನ್ನುತ್ತಾ ರಮೇಶ್ ನಕ್ಕಾಗ ಮಲ್ಲಿಕಾಗೆ ರೇಗಿತ್ತು! ಇದ್ದಕ್ಕಿದ್ದಂತೆ ಅವಳ ಮಾತು ಲಂಗುಲಗಾಮಿಲ್ಲದೆ ಎತ್ತೆತ್ತಲೋ ಹೋಗಿತ್ತು.

ಅವತ್ತಿನ ಪ್ರೋಗ್ರಾಮಿಗೆ ಸರಿಯಾದ ರೆಸ್ಪಾನ್ಸ್ ಬಂದಿರಲಿಲ್ಲವೆಂಬ ಸಿಟ್ಟು ಕೂಡ ಸೇರಿ, ಅಪರೂಪಕ್ಕೆ ಎರಡು ಸಿಪ್ ವೈನ್ ಕುಡಿಯುವ ಮಲ್ಲಿಕಾ ಅವತ್ತು ಎರಡು ಗ್ಲಾಸ್ ವೈನ್ ಕುಡಿದಿದ್ದಳು. ಎಲ್ಲೋ ಒಳಗಿದ್ದ ಮನುಷ್ಯರ ವಿಷಯ ಮಾತಾಡುತ್ತಾ ಆಡುತ್ತಾ ಅವರಿಗರಿವಿಲ್ಲದೆಯೇ ಹೊರಸಿಡಿಯುವ